# ನಿಮ್ಮೊಡನೆ

## ಕಾನೂನು ಸಂಘರ್ಷದಲ್ಲಿರುವ ಮಕ್ಕಳಿಗೆ ಸಮಸ್ಯೆಗಳು 'ಬಾಲನ್ಯಾಯ ಕಾಯ್ದೆ' ಪರಿಣಾಮಕಾರಿ ಅನುಷ್ಠಾನ ಅಗತ್ಯ

ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಮಕ್ಕಳನ್ನು ಕಾನೂನು ಹಾಗೂ ಸಮಾಜ ಸಹಾನುಭೂತಿಯಿಂದ ನೋಡುತ್ತದೆ. ಬುದ್ಧಿ ಹಾಗೂ ದೇಹ ಎರಡೂ ಸರಿಯಾಗಿ ವಿಕಸನ ಹೊಂದದ ಮಕ್ಕಳು ದುಡುಕಿನಲ್ಲಿ ಮಾಡುವ ಕೃತ್ಯಗಳನ್ನು ಮಾನವೀಯ ನೆಲೆಗಟ್ಟಿನಲ್ಲಿ ನೋಡುವುದು ಅಗತ್ಯವೂ ಹೌದು. ಈ ಅಗತ್ಯವನ್ನು ವಿಶ್ವಸಂಸ್ಥೆ ಕೂಡ ಒತ್ತಿ ಹೇಳಿದೆ. ಆ ಕಾರಣದಿಂದಲೇ, ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ಪೋಷಣೆ ಮತ್ತು ಸಂರಕ್ಷಣೆಯ ಬಗ್ಗೆ 'ಬಾಲನ್ಯಾಯ ಕಾಯ್ದೆ 2015' ವಿಶೇಷ ಎಚ್ಚರಿಕೆ ವಹಿಸಿದೆ. ಆದರೆ, ಬಹುತೇಕ ಕಾಯ್ದೆಗಳನ್ನು ಆಶಯರೂಪದಲ್ಲಷ್ಟೇ ಇರಿಸುವುದರಲ್ಲಿ ಪರಿಣತಿ ಸಾಧಿಸಿರುವ ನಮ್ಮ ಅಧಿಕಾರಿ ವರ್ಗ, 'ಬಾಲನ್ಯಾಯ ಕಾಯ್ದೆ'ಯ ಆಶಯಗಳ ಅನುಷ್ಠಾನದಲ್ಲೂ ಹಿಂದೆ ಬಿದ್ದಿದೆ ಎನ್ನುವ ಕಳವಳಕಾರಿ ಸುದ್ದಿ ಪ್ರಕಟಗೊಂಡಿದೆ. ಮೈಸೂರು ವಿಶ್ವವಿದ್ಯಾಲಯದ 'ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರ' (ಸಿಎಸ್‌ಎಸ್‌ಇಐಪಿ) ನಡೆಸಿರುವ ಅಧ್ಯಯನ, 'ಬಾಲನ್ಯಾಯ ಕಾಯ್ದೆ' ಜಾರಿಗೊಂಡು 9 ವರ್ಷಗಳಾದರೂ ಸಮರ್ಪಕವಾಗಿ ಅನುಷ್ಠಾನಕ್ಕೆ ಬಾರದಿರುವುದನ್ನು ಗಮನಿಸಿದೆ.

ಕರ್ನಾಟಕ ಸೇರಿದಂತೆ ಹತ್ತು ರಾಜ್ಯಗಳಲ್ಲಿ ಸುಮಾರು ಎರಡು ವರ್ಷಗಳ ಕಾಲ ಅಧ್ಯಯನ ನಡೆಸಿರುವ 'ಸಿಎಸ್‌ಎಸ್‌ಇಐಪಿ', ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳು ಎದುರಿಸುತ್ತಿರುವ ಹಲವು ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದೆ. ಪರಿವೀಕ್ಷಣಾಲಯಗಳಲ್ಲಿ ನಡೆಯುವ ವಿಚಾರಣೆ ಕಾಲಮಿತಿಯಲ್ಲಿ ಜರುಗುತ್ತಿಲ್ಲವಾದ್ದರಿಂದ, ಮಕ್ಕಳು ವರ್ಷಗಟ್ಟಲೆ ಪರಿವೀಕ್ಷಣಾಲಯಗಳಲ್ಲೇ ಇರುವ ಸ್ಥಿತಿ ತಲೆದೋರಿದೆ. ದೀರ್ಘ ಕಾಲ ಪರಿವೀಕ್ಷಣಾಲಯಗಳಲ್ಲಿ ಇರುವ ಸ್ಥಿತಿ ಮಕ್ಕಳ ಮನಸ್ಸಿನ ಮೇಲೆ ಗಂಭೀರ ಪರಿಣಾಮಗಳನ್ನು ಉಂಟು ಮಾಡುತ್ತಿದೆ. ಪ್ರತಿ ಏಳು ಮಕ್ಕಳಲ್ಲಿ ಒಬ್ಬರು ಆತಂಕ, ಖಿನ್ನತೆಯಿಂದ ಬಳಲುತ್ತಿದ್ದಾರೆ. ಈ ಮಾನಸಿಕ ಒತ್ತಡ ಮಕ್ಕಳಲ್ಲಿ ಆಕ್ರಮಣಕಾರಿ ಪ್ರವೃತ್ತಿಯನ್ನು ಹೆಚ್ಚಿಸುತ್ತಿದೆ. ಮಾನಸಿಕ ಸಮಸ್ಯೆಗಳು ಕೆಲವು ಮಕ್ಕಳಲ್ಲಿ ಆರಂಭಿಕ ಹಂತದಲ್ಲಿದ್ದರೆ, ಮತ್ತೆ ಕೆಲವರಲ್ಲಿ ಆತಂಕಕಾರಿ ಹಂತ ದಾಟಿದೆ ಎಂದು 'ಸಿಎಸ್‌ಎಸ್‌ಇಐಪಿ' ಅಧ್ಯಯನ ತಿಳಿಸಿದೆ.

ಕಾನೂನಿನೊಂದಿಗೆ ಸಂಘರ್ಷ ನಡೆಸುವ ಕೆಲವು ಮಕ್ಕಳು ಕುಟುಂಬದ ಬೆಂಬಲವನ್ನು ಪಡೆಯಲು ಸಾಧ್ಯವಾಗದಿರುವ ಸಂಗತಿಯೂ ಅಧ್ಯಯನದಿಂದ ಬೆಳಕಿಗೆ ಬಂದಿದೆ. ಜಾಮೀನು ಪಡೆಯುವ ಅವಕಾಶ ಇದ್ದ ಸಂದರ್ಭದಲ್ಲೂ ಕೆಲವು ಮಕ್ಕಳ ನೆರವಿಗೆ ಪೋಷಕರು ಮುಂದಾಗುತ್ತಿಲ್ಲ. ಬಡತನ, ತಿಳಿವಳಿಕೆಯ ಕೊರತೆ ಮತ್ತಿತರ ಕಾರಣಗಳಿಂದಾಗಿ ಮಕ್ಕಳಿಗೆ ಜಾಮೀನು ಕೊಡಿಸಲು ಸಾಧ್ಯವಾಗದಿರುವ ಪೋಷಕರೂ ಇದ್ದಾರೆ. ಅಂಥ ಕುಟುಂಬಗಳ ಮಕ್ಕಳು ಪರಿವೀಕ್ಷಣಾಲಯಗಳಲ್ಲೇ ಉಳಿಯುವ ಅನಿವಾರ್ಯತೆ ಉಂಟಾಗಿದೆ.

ಕೆಲವು ಪರಿವೀಕ್ಷಣಾಲಯಗಳಲ್ಲಿ ಮಕ್ಕಳನ್ನು ನಿಯಂತ್ರಿಸಲು ನೀಡುವ ಕಠಿಣ ಶಿಕ್ಷೆ ಕೂಡ ಎಳೆಯ ಮನಸ್ಸುಗಳು ಗಾಸಿಗೊಳ್ಳಲು ಕಾರಣವಾಗಿದೆ. ಕದ್ದು ಮುಚ್ಚಿ ಮಾದಕ ವಸ್ತುಗಳನ್ನು ಸೇವಿಸುವ ಮಕ್ಕಳೂ ಇದ್ದಾರೆ ಎಂದು 'ಸಿಎಸ್‌ಎಸ್‌ಇಐಪಿ' ವರದಿ ಹೇಳಿದೆ. ಆರ್ದ್ರತೆಯನ್ನು ಕಳೆದುಕೊಂಡಂತೆಲ್ಲ ಮನಸ್ಸು ಜಡವಾಗುತ್ತಾ ಹೋಗುವುದು ಹಾಗೂ ವ್ಯಸನಗಳನ್ನು ಆಶ್ರಯಿಸುವುದು ಅಸಹಜವೇನಲ್ಲ.

ಕಾನೂನಿನೊಂದಿಗೆ ಸಂಘರ್ಷ ನಡೆಸುವ ಮಕ್ಕಳು ಎದುರಿಸುವ ಮಾನಸಿಕ ಸಮಸ್ಯೆಗಳನ್ನು ನಿಭಾಯಿಸಲು ಆಪ್ತ ಸಮಾಲೋಚಕರ ನೆರವು ಅಗತ್ಯ. ಆದರೆ, ಅಗತ್ಯ ಸಂಖ್ಯೆಯ ಆಪ್ತ ಸಮಾಲೋಚಕರು ಲಭ್ಯವಿಲ್ಲ. ಇರುವ ಸಮಾಲೋಚಕರಿಗೆ ಕೂಡ ಸೂಕ್ತ ತರಬೇತಿ ಇಲ್ಲ.

ಮಕ್ಕಳಲ್ಲಿ ರಚನಾತ್ಮಕ ಬದಲಾವಣೆಗಳನ್ನು ತರುವ ಪ್ರಯತ್ನಗಳೂ ಕೆಲವು ಪರಿವೀಕ್ಷಣಾಲಯಗಳಲ್ಲಿ ನಡೆಯುತ್ತಿರುವುದನ್ನು 'ಸಿಎಸ್‌ಎಸ್‌ಇಐಪಿ' ಗುರ್ತಿಸಿದೆ. ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಚಿತ್ರಕಲೆ, ಕರಕುಶಲ ಕಲೆಗಳಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸುವ ಮೂಲಕ ಮಕ್ಕಳ ಮನೋವಿಕಾಸದ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಇಂಥ ಪ್ರಯತ್ನಗಳು ಎಲ್ಲ ಪರಿವೀಕ್ಷಣಾಲಯಗಳಲ್ಲಿ ಕಡ್ಡಾಯವಾಗಿ ನಡೆಯಬೇಕು ಹಾಗೂ ಅವುಗಳ ಅನುಷ್ಠಾನ ಮತ್ತು ಪರಿಣಾಮದ ಬಗ್ಗೆ ಮೌಲ್ಯಮಾಪನ ನಡೆಯಬೇಕು.

ಕಾನೂನಿನೊಡನೆ ಸಂಘರ್ಷ ನಡೆಸುವ ಮಕ್ಕಳಲ್ಲಿ ಮಾನಸಿಕ ಬದಲಾವಣೆ ತರುವುದು 'ಬಾಲನ್ಯಾಯ ಕಾಯ್ದೆ'ಯ ಪ್ರಮುಖ ಉದ್ದೇಶ. ಈ ಉದ್ದೇಶವನ್ನೇ ಬುಡಮೇಲು ಮಾಡುವ ರೀತಿಯಲ್ಲಿ ಪರಿವೀಕ್ಷಣಾಲಯಗಳಲ್ಲಿನ ಮಕ್ಕಳನ್ನು ನಡೆಸಿಕೊಳ್ಳುತ್ತಿರುವುದು ದುರದೃಷ್ಟಕರ. ಕಾಯ್ದೆಯ ಆಶಯ ಎಷ್ಟೇ ಉದಾತ್ತವಾಗಿದ್ದರೂ, ಸಮರ್ಪಕವಾಗಿ ಜಾರಿಗೆ ತರುವುದು ಸಾಧ್ಯವಾಗದೇ ಹೋದಲ್ಲಿ ಅದು ಜಡವಾಗುತ್ತದೆ ಹಾಗೂ ಅಮಾನವೀಯವಾಗುತ್ತದೆ.

ಕಾನೂನಿನೊಡನೆ ಸಂಘರ್ಷ ನಡೆಸುವ ಮಕ್ಕಳಲ್ಲಿ ಮಾನಸಿಕ ಬದಲಾವಣೆ ತರುವುದು 'ಬಾಲನ್ಯಾಯ ಕಾಯ್ದೆ'ಯ ಪ್ರಮುಖ ಉದ್ದೇಶ. ಈ ಉದ್ದೇಶವನ್ನೇ ಬುಡಮೇಲು ಮಾಡುವ ರೀತಿಯಲ್ಲಿ ಪರಿವೀಕ್ಷಣಾಲಯಗಳಲ್ಲಿನ ಮಕ್ಕಳನ್ನು ನಡೆಸಿಕೊಳ್ಳುತ್ತಿರುವುದು ದುರದೃಷ್ಟಕರ.




ಬಡತನದ ಕಾರಣದಿಂದಾಗಿ ಮಕ್ಕಳಿಗೆ ಜಾಮೀನು ದೊರಕಿಸಿಕೊಡಲು ಸಾಧ್ಯವಾಗದಿರುವ ಸ್ಥಿತಿ ಹಾಗೂ ಕಾನೂನಿನೊಂದಿಗೆ ಸಂಘರ್ಷ ನಡೆಸುವ ಬಾಲಕಿಯರಿಗೆ ಪ್ರತ್ಯೇಕ ಪರಿವೀಕ್ಷಣಾಲಯಗಳಿಲ್ಲದಿರುವುದು ದುರದೃಷ್ಟಕರ. ಕಾನೂನಿನ ಸೌಲಭ್ಯಗಳು ಬಡವರಿಗೂ ಒದಗುವಂತಹ ಯೋಜನೆಗಳನ್ನು ರೂಪಿಸುವ ಬಗ್ಗೆ ಸರ್ಕಾರ ಕಾರ್ಯಪ್ರವೃತ್ತವಾಗಬೇಕು. ಹೆಣ್ಣುಮಕ್ಕಳಿಗೆ ಪ್ರತ್ಯೇಕ ಪರಿವೀಕ್ಷಣಾಲಯಗಳೂ ಅಗತ್ಯ.

■ ರಘುನಾಥ ಚ.ಹ.